ಮೇಷ್ಟ್ರಿಗೆ ರವಾನಿಸಿದವಳು ಪ್ರತ್ಯುತ್ತರಕ್ಕಾಗಿ ಕ್ಷಣವನ್ನು ಯುಗವಾಗಿಸಿ ಕಾಯ್ದಳು. ಕೊನೆಗೂ ಬಂದಿದ್ದು ಪ್ರತ್ಯುತ್ತರವಲ್ಲ, ಅವಳದೇ ಪತ್ರ ಅಲ್ಲಲ್ಲಿ ದೀರ್ಘ, ಒತ್ತಕ್ಷರ, ಅಲ್ಪಪ್ರಾಣ, ಮಹಾಪ್ರಾಣಗಳ ತಿದ್ದುಪಡಿಯೊಂದಿಗೆ ಮರಳಿ ಬಂದಿತ್ತು. ಪತ್ರ ಕೈಗಿತ್ತ ಗುರುಲಿಂಗ ಹೇಳಿದ, 'ಅಕ್ಕಾ ಮೇಷ್ಟ್ರು ಹೇಳಿದರು ನೀನು ಗ್ರಾಮರ್‌ನಲ್ಲಿ ಭಾಳ ವೀಕ್ ಅಂತೆ' ಅಸಹಾಯಕತೆಯಿಂದ ಶಾಂತಿಲಕ್ಷ್ಮಿ ತಲೆ ಚಚ್ಚಿಕೊಂಡಳು. ಈಗಾಗಲೇ ಒಂದು ಹೆಜ್ಜೆ ಮುಂದಿಟ್ಟವಳಿಗೆ ಇನ್ನೊಂದು ಹೆಜ್ಜೆ ಮುಂದಿಡುವುದು ಅಷ್ಟೇನೂ ಕಷ್ಟದ ಕೆಲಸವಾಗಿರಲಿಲ್ಲ. ಆ ದಿನ ಮನೆಯ ಮೇಲಿನ ಮಹಡಿಯಲ್ಲಿ ದೊಕಾಚಿ ಮೇಷ್ಟ್ರೊಂದಿಗೆ ಸಾಹಿತ್ಯದ ಚರ್ಚೆಯಲ್ಲಿ ತೊಡಗಿದ್ದಾಗ ಶಾಂತಿಲಕ್ಷ್ಮಿ ಇದ್ದಕ್ಕಿದ್ದಂತೆ ಮೈಮೇಲಿನ ಬಟ್ಟೆ ಕಿತ್ತೊಗೆದು ಹುಟ್ಟುಡುಗೆಯಲ್ಲಿ ನಿಂತು, 'ನೋಡಿ ಮೇಷ್ಟ್ರೆ ಏನನಿಸುತ್ತೆ' ಎಂದು ಕೇಳಿದಳು. ದೊಕಾಚಿ ಮೇಷ್ಟ್ರು ಏಕಕಾಲಕ್ಕೆ ಒಂದು ತೆರನಾದ ನಿರ್ಲಿಪ್ತತೆ ಮತ್ತು ಭಕ್ತಿಯ ಭಾವದಿಂದ, 'ಅಕ್ಕ ಮಹಾದೇವಿಯ ದರುಶನವಾದ ಅನುಭವವಾಯಿತು' ಎಂದವರೆ ಎದ್ದು ಶಾಂತಿಲಕ್ಷ್ಮಿಯ ಕಾಲಿಗೆರಗಿ 'ತನುಕರಗದವರಲ್ಲಿ' ವಚನ ವಾಚಿಸತೊಡಗಿದರು. ಶಾಂತಲಕ್ಷ್ಮಿಯ ಹೃದಯದಲ್ಲಿ ಈಗ ಪ್ರೇಮದ ಜಾಗದಲ್ಲಿ ಕ್ರೋಧ ಹೆಡೆಯಾಡತೊಡಗಿತು. ಪ್ರೀತಿಯ ಜಾಗವನ್ನು ಸೇಡು ಆಕ್ರಮಿಸಿಕೊಂಡಿತು. ಮೈಗೆ ಅರೆಬರೆ ಬಟ್ಟೆ ಸುತ್ತಿಕೊಂಡವಳೆ ಮೇಷ್ಟ್ರನ್ನು ಬಿಗಿದಪ್ಪಿ ಕಿಟಾರನೆ ಕಿರುಚಿಕೊಂಡಳು. ಆ ಸಂಜೆಯೇ ಸಭೆ ಸೇರಿದ ಮಠದ ಆಡಳಿತ ಮಂಡಳಿ ಅನುಚಿತ ವರ್ತನೆಯ ಕಾರಣ ನೀಡಿ ದೊಕಾಚಿ ಮೇಷ್ಟ್ರನ್ನು ನೌಕರಿಯಿಂದ ವಜಾಗೊಳಿಸಿದ್ದಾಗಿ ಆದೇಶ ಹೊರಡಿಸಿತು. ಮೇಷ್ಟ್ರ ವೈಚಾರಿಕ ಕ್ರಾಂತಿಯನ್ನು ದಮನಗೊಳಿಸಲು ಮಠದ ಆಡಳಿತ ಮಂಡಳಿ ಶಾಂತಿಲಕ್ಷ್ಮಿಯನ್ನು ಬಳಸಿಕೊಂಡಿತು ಎನ್ನುವ ಅನುಮಾನದ ಮಾತುಗಳು ಅಲ್ಲಲ್ಲಿ ಕೇಳಿಬಂದವು.

★★★

ಇದೆಲ್ಲ ನಡೆದು ಹಲವು ವರ್ಷಗಳೇ ಗತಿಸಿ ಹೋಗಿವೆ. ಶಾಂತಿಲಕ್ಷ್ಮಿಗೆ ಸೋದರ ಮಾವನ ಮಗನೊಂದಿಗೆ ಮದುವೆಯಾಗಿ ಎರಡು ಮಕ್ಕಳಾಗಿವೆ. ಮಠ ಈಗ ಮೊದಲಿಗಿಂತ ದೊಡ್ಡದಾಗಿ ಬೆಳೆದು ಸುತ್ತಲೂ ಕಾಲೇಜು, ವಾಣಿಜ್ಯ ಸಂಕೀರ್ಣಗಳು ತಲೆ ಎತ್ತಿವೆ. ಕೇರಿಯವರ ತಲೆಗಳನ್ನು ಅಪ್ಪಣ್ಣ ಮತ್ತು ಅವನ ಮಕ್ಕಳ ಕ್ಷೌರಿಕ ವೃತ್ತಿಯ ವ್ಯಾಪ್ತಿಯಿಂದ ಹೊರಗೇ ಇರಿಸಲಾಗಿದೆ. ಕಾಫ್ಕಾ, ನೆರೂಡ, ಕಮೂ, ಬ್ರೆಕ್ಟ್, ಮಾರ್ಕ್ವೆಜ್ ಇವರೆಲ್ಲ ಗೌಡರ ಹೊಲದಲ್ಲಿ ಕೂಲಿ ಆಳುಗಳಾಗಿ ದುಡಿಯುತ್ತ ಬದುಕಿನ ಬಂಡಿ ಎಳೆಯುತ್ತಿರುವವರು. ಮೊದಲಿಗಿಂತ ವಯಸ್ಸಾದವರಂತೆ ಕಾಣುತ್ತಿರುವ ದೊಕಾಚಿ ಮೇಷ್ಟ್ರು, 'ಕ್ರಾಂತಿ ಆಗ್ಬೇಕರಯ್ಯ ಕ್ರಾಂತಿ. ಒಂದು ವೈಚಾರಿಕ ಕ್ರಾಂತಿಯಾಗಿ ಜನರಲ್ಲಿ ತಿಳಿವಳಿಕೆ ಮೂಡಿದಾಗಲೇ ಬದಲಾವಣೆ ಸಾಧ್ಯ ನೋಡಿ' ಎಂದು ಎದುರು ಸಿಕ್ಕಿದವರಿಗೆಲ್ಲ ಹೇಳುತ್ತ ಊರ ತುಂಬ ಈಗಲೂ ತಿರುಗಾಡುತ್ತಿರುತ್ತಾರೆ.


### ರಾಜಕುಮಾರ ಕುಲಕರ್ಣಿ

ಮೂಲತಃ ಕಲಬುರ್ಗಿ ತಾಲ್ಲೂಕಿನ ಕುಮಸಿ ಎಂಬ ಹಳ್ಳಿಯವರು. ಗುಲಬರ್ಗಾ ವಿಶ್ವವಿದ್ಯಾಲಯದಿಂದ ಗ್ರಂಥಾಲಯ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಪ್ರಸ್ತುತ ಬಾಗಲಕೋಟೆಯ ಬಿ.ವಿ.ವಿ. ಸಂಘದ ಎಸ್. ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಮುಖ್ಯಗ್ರಂಥಪಾಲಕರು. 'ಪೂರ್ಣ ಸತ್ಯ', 'ಮನದ ಮಾತು', 'ಅನಾವರಣ', 'ಅನ್ವೇಷಣೆ', 'ಬೊಗಸೆಯಲ್ಲಿ ಕಡಲು', 'ಭಾವಭಿತ್ತಿ', 'ಹೆಜ್ಜೆ ಮೂಡಿದ ಹಾದಿ' ಎಂಬ ಲೇಖನ ಸಂಗ್ರಹಗಳನ್ನು ಪ್ರಕಟಿಸಿದ್ದಾರೆ.